ಎಂದುಕೊಂಡರು. ಅವರ ಹೆಂಡತಿ ರೇವತಿ ಇನ್ನೂ ಹೂದೋಟದಲ್ಲಿಯೇ ಇದ್ದರು. ಪ್ರಸಾದ್ ಚಿತ್ರದತ್ತಲೇ ನೋಡುತ್ತಿದ್ದರು. ಆಕೆ ಹತ್ತಿರ ಬಂದರೆ ಇವಕ್ಕೆಲ್ಲಾ ಅವಕಾಶವಿಲ್ಲ. ಅವರು ಯಾವಾಗಲೂ ಎಚ್ಚರಿಕೆ ಕೊಡುತ್ತಿದ್ದರು, "ಬೀದಿಯಲ್ಲಿ ಹೋಗೋರನ್ನೆಲ್ಲಾ ಫೇಸ್‌ಬುಕ್ ಫ್ರೆಂಡ್ ಆಗೋದಕ್ಕೆ ಒಪ್ಪಿಕೋ ಬೇಡಿ. ಅದು ನಿಮ್ಮ ಘನತೆಗೆ ಹೊಂದುವುದಿಲ್ಲ. ನೀವು ಬ್ಯಾಂಕಿನಲ್ಲಿ ಐಟಿ ಹೆಡ್ ಅನ್ನೋದನ್ನ ಮರೀಬೇಡಿ." ಆದರೂ ಪ್ರಸಾದ್ ಲೆಕ್ಕಿಸಲಿಲ್ಲ. ವಿಶ್ವಕುಟುಂಬಿ ಅವರು.

ಅವರಿಗೆ ಕುತೂಹಲ ಎನಿಸಿದ್ದು ಯಾರ್‍ಯಾರು ಕಾಮೆಂಟ್ ಮಾಡಿದ್ದಾರೆ ಎನ್ನುವುದು. ಕೂಡಲೆ ಕಾಮೆಂಟ್ಸ್ ಎನ್ನುವಲ್ಲಿ ಕ್ಲಿಕ್ ಮಾಡಿದರು. ಅನೇಕ ಹೆಸರುಗಳ ನಡುವೆ ಗೀತಾ ನಾಗರಾಜ್ ಎಂಬ ಹೆಸರನ್ನು ನೋಡಿ ಉತ್ಸುಕರಾದರು. 'ಮೊಮ್ಮಗ ನಿನ್ನಷ್ಟೇ ಮುದ್ದಾಗಿದ್ದಾನೆ' ಎಂದು ನುಡಿದಿದ್ದಳು ಆಕೆ. ಪಕ್ಕದಲ್ಲಿಯೇ ಇದ್ದ ಅವಳ ಐಕಾನ್ ಮೇಲೆ ಕ್ಲಿಕ್ ಮಾಡಿದರು. ಅವಾಕ್ಕಾದರು ಪ್ರಸಾದ್. ಹೌದು, ಅವಳೇ ಇದು. ಗಂಡನ ಪಕ್ಕ ನಗುನಗುತ್ತಾ ನಿಂತಿದ್ದಾಳೆ, ಅವನು ಅವಳ ಹೆಗಲ ಮೇಲೆ ಕೈಹಾಕಿದ್ದಾನೆ. ಹಿಂದೆ ಇದ್ದ ಹಾಗೆಯೇ ಬ್ಯೂಟಿ ಕ್ವೀನ್ ತರಹ ಇದ್ದಾಳೆ.

ಹೇಳಲಾರದ ವೇದನೆ ಅವರನ್ನು ಆಕ್ರಮಿಸಿತು. ಹಿಂದೆ ಆದ ಘಟನೆಗಳು ಮನದ ಪರದೆಯ ಮೇಲೆ ಹಾದು ಹೋದುವು. ಗೀತಾ ಅವರ ಮಾಜಿ ಗೆಳತಿ, ಅನಿತಾಳ ಹತ್ತಿರದ ಸಂಬಂಧಿ. ಅವಳನ್ನು ಆಗಾಗ ನೋಡುತ್ತಿದ್ದರು. ಅವಳು ಕೂಡ ಅನಿತಾಳಂತೆಯೇ ಸ್ಫುರದ್ರೂಪಿ, ಒಳ್ಳೆಯ ಬಣ್ಣ, ಮೈಕಟ್ಟು ಬೇರೆ. ಕನ್ನಡ, ಇಂಗ್ಲಿಷ್ ಎರಡರಲ್ಲಿಯೂ ಚೆನ್ನಾಗಿ ಮಾತನಾಡುತ್ತಿದ್ದಳು. ಸದಾ ನಗುಮುಖ. ಯಾರಾದರೂ ಅವಳ ಬಲೆಗೆ ಬಿದ್ದಾರು. ಹೇಗೋ ಅವಳ ತಂದೆಯ ಪರಿಚಯವೂ ಆಗಿ ಅವರ ಮನೆಗೆ ಹೋಗುವುದು ಪ್ರಾರಂಭವಾಯಿತು. ಅಲ್ಲಿ ತಿಂಡಿ, ಕಾಫಿಗಳ ಉಪಚಾರವೂ ಆಗುತ್ತಿತ್ತು. ಪ್ರಸಾದ್ ಹೆಸರಾಂತ ಕಾಲೇಜಿನಲ್ಲಿ ಓದಿ ಪದವೀಧರರಾಗಿದ್ದರಲ್ಲದೇ, ಅಲ್ಲಿಯೇ ಉಚ್ಚಶಿಕ್ಷಣವನ್ನೂ ಪಡೆಯುತ್ತಿದ್ದರು. ಇನ್ನೇನು ಬೇಕು ಹುಡುಗಿಯ ಮನೆಯವರಿಗೆ? ಇವರ ತಾಯಿ ಕೊಡುತ್ತಿದ್ದ ಎಚ್ಚರ ತಪ್ಪಿದ್ದಲ್ಲ – "ಅವರ ಜತೆ ನಿನಗೇಕೆ ಸಲುಗೆ? ಇದು ಒಳ್ಳೆಯದಕ್ಕಲ್ಲ. ಲಂಗು ಲಗಾಮಿಲ್ಲದ ಜನ ಅವರು."

ಯೌವನದ ಉತ್ಸಾಹ, ಆತುರ. ಯಾರ ಮಾತನ್ನೂ ಕೇಳುವಂತಿರಲಿಲ್ಲ. ಆ ದಿನ ಧೈರ್ಯ ಮಾಡಿ ಪ್ರಸಾದ್ ಮನೆಯಲ್ಲಿ ಹೇಳಿದರು – "ನಾನು ಅವಳನ್ನೇ ಮದುವೆಯಾಗೋದು". ಸಿಡಿಲುಹೊಡೆದಂತಾಗಿತ್ತು ಅವರ ತಂದೆ ತಾಯಿಯರಿಗೆ. "ಅವಳ ವಿದ್ಯೆ ನೈವೇದ್ಯ, ಬಿ.ಎ. ಫೇಲಾಗಿ ಈಗ ಮುಗಿಸಿದಾಳೆ. ಅವಳು ನಿನಗೆ ಯೋಗ್ಯಳಾದ ಹುಡುಗಿಯಲ್ಲ. ಹುಡುಗಿ ನೋಡೋಕೆ ಲಕ್ಷಣವಾಗಿದ್ದರೆ ಸಾಕಾ? ನಿನ್ನ ಓದಿಗೆ ತಕ್ಕ ಓದು ಬೇಡವಾ? ಅವಳ ತಂದೆ ಪಾಪರ್ ಚೀಟಿ. ಹೆಸರಿಲ್ಲದ ಕುಟುಂಬ ಅದು." ತಾಯಿ ಧಾರಾಕಾರವಾಗಿ ಕಣ್ಣೀರು ಸುರಿಸಿ – "ಈ ಸುದ್ದಿಯ ಬದಲು ನನಗೆ ವಿಷ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು" ಎಂದರು. ಕೊನೆಗೆ ಮಗನ ಆಸೆಗೆ ಅಡ್ಡ ಬರಬಾರದು ಎಂದು ಮದುವೆಗೆ ಒಪ್ಪಿಗೆ ಕೊಟ್ಟಿದ್ದರು. ಭಂಡ ಧೈರ್ಯ. ತಾವೇ ಗೀತಾಳ ತಂದೆ ತಾಯಿಯರನ್ನು ಕಂಡು ಅವರ ಮಗಳ ಕೈ ಬೇಡಿದರು. ಬಹು ಸಂತೋಷದಿಂದಲೇ ಅವರು ಅಸ್ತು ಎಂದಿದ್ದರು.

ಅವರ ಪ್ರೇಮದ ಮೊದಲಂಕ ಪ್ರಾರಂಭವಾಯಿತು. ಅವಳೊಡನೆ ವಾಕಿಂಗ್ ಹೋಗಿದ್ದು, ಅನೇಕ ಸಿನಿಮಾಗಳನ್ನು ನೋಡಿದ್ದು, ಆಟೊರಿಕ್ಷಾದಲ್ಲಿ ಮೈಗೆ ಮೈ ಹಚ್ಚಿ ಕುಳಿತಿದ್ದು, ಹೋಟೆಲುಗಳಲ್ಲಿ ಸವಿತಿಂಡಿಗಳನ್ನು ತಿಂದದ್ದು, ಒಂದೇ ಲೋಟದಿಂದ ಇಬ್ಬರೂ ಕಾಫಿ ಕುಡಿದದ್ದು ಎಲ್ಲವೂ ಮರುಕಳಿಸಿದವು. ಸದ್ಯ, ಒಟ್ಟಿಗೆ ಮಲಗಿರಲಿಲ್ಲ! ಅವ್ಯಾಹತವಾಗಿ ನಡೆದ ಒಂದು ವರ್ಷದ ಓಡಾಟ.

ಪ್ರೇಮದ ಎರಡನೆಯ ಅಂಕವಾಗಿ, ಅವರಿಗೆ ವೀಣಾಳ ಪರಿಚಯವಾಯಿತು. ಅವಳು ಇವರ ಕಾಲೇಜಿನವಳೇ ಆದರೂ ಬೇರೆ ವಿಭಾಗದವಳು. ಪ್ರತಿಭಾವಂತೆ, ರ್‍ಯಾಂಕ್ ಗಳಿಸಿದ ವಿದ್ಯಾರ್ಥಿನಿ. ಆಗಲೇ